ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಯವರು) :

ಅ) ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡ್‌ಗಳಲ್ಲಿ ತಲಾ ಒಂದು ರಸ್ತೆಯನ್ನು ಮಾದರಿ ರಸ್ತೆಯನ್ನಾಗಿ ಪರಿವರ್ತಿಸಿ ಈ ರಸ್ತೆಯನ್ನು ಮಾದರಿಯಾಗಿಟ್ಟುಕೊಂಡು ಇನ್ನು ಮುಂದೆ ಅಭಿವೃದ್ಧಿಪಡಿಸುವ ರಸ್ತೆಗಳನ್ನು ಇದೇ ಮಾದರಿಯಾಗಿ ಅಭಿವೃದ್ಧಿಪಡಿಸಬೇಕೆಂಬುದೇ ವೈಜ್ಞಾನಿಕ ಚಿಂತನೆ.

ಆ) 2004–05ನೇ ಸಾಲಿನಲ್ಲಿ ಈ ಬಾಬ್ತಿಗೆ ಯಾವುದೇ ಹಣ ಮೀಸಲಿಟ್ಟಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

297(294) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಬ್ಯಾಡಗಿ ತಾಲ್ಲೂಕನ್ನು ಮಾತ್ರ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಯೋಜನೆಯಲ್ಲಿ ಸುತ್ತಮುತ್ತಲಿನ ಎಲ್ಲಾ ತಾಲ್ಲೂಕುಗಳನ್ನು ಸೇರಿಸಿ ಬ್ಯಾಡಗಿ ತಾಲ್ಲೂಕನ್ನು ಮಾತ್ರ ಕೈ ಬಿಡಲು ಕಾರಣಗಳೇನು ;

ಇ) ಬ್ಯಾಡಗಿ ತಾಲ್ಲೂಕು ಪ್ರದೇಶ ಎತ್ತರದಲ್ಲಿದೆ ಎಂಬ ತಾಂತ್ರಿಕ ಕಾರಣವನ್ನು ನೀಡಿರುವುದು ಸರಿಯೇ ;

ಈ) ಸರಿಯಾಗಿದ್ದಲ್ಲಿ, ಆ ಕುರಿತು ಸರ್ಕಾರದ ಸ್ಪಷ್ಟೀಕರಣವೇನು ;

ಉ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಲಿಫ್ಟ್ ಮೂಲಕ ಬ್ಯಾಡಗಿ ತಾಲ್ಲೂಕಿಗೆ ನೀರನ್ನು ಹರಿಸುವ ಸಾಧ್ಯತೆಗಳನ್ನು ಪರಿಶೀಲಿಸಿ, ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಊ) ಮೀಸಲು ಕ್ಷೇತ್ರವಾದ ಬ್ಯಾಡಗಿ ತಾಲ್ಲೂಕು ಹಿಂದುಳಿದ ಪ್ರದೇಶವಾಗಿದ್ದು, ನೀರಾವರಿಯ ಕುರಿತಾದ ಅನ್ಯಾಯವನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಆಡಳಿತಾತ್ಮಕವಾಗಿ ಅನುಮೋದನೆಗೊಂಡಿರುವ ತುಂಗಾ ಮೇಲ್ದಂಡೆ ಯೋಜನೆಯ ಅಡಿ ಬ್ಯಾಡಗಿ ತಾಲ್ಲೂಕಿನ ಪ್ರದೇಶವು ಸೇರಿರುವುದಿಲ್ಲ.

ಆ) ತುಂಗಾ ಮೇಲ್ಕಂಡ ಯೋಜನೆಯ ಮುಖ್ಯ ಕಾಲುವೆಯು ಕಾಂಟೂರ್ ಕಾಲುವೆ ಆಗಿದ್ದು, ಕಾಲುವೆಯ ಬಲಭಾಗದಲ್ಲಿನ ಪ್ರದೇಶವು ನೀರಾವರಿಗೆ ಒಳಪಡುತ್ತದೆ. ಬ್ಯಾಡಗಿ ತಾಲ್ಲೂಕು ಕಾಲುವೆಯ ಎಡಭಾಗದಲ್ಲಿದ್ದು, ಭೌಗೋಳಿಕವಾಗಿ ಎತ್ತರದ ಪ್ರದೇಶದಲ್ಲಿರುವುದರಿಂದ ಅಚ್ಚುಕಟ್ಟಿನವ್ಯಾಪ್ತಿಯಲ್ಲಿ ಸೇರಿರುವುದಿಲ್ಲ.

ಇ) ಹೌದು.

ಈ) ಬ್ಯಾಡಗಿ ತಾಲ್ಲೂಕಿನ ಸರಹದ್ದಿನ ಬಳಿ ಇರುವ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಾಲುವೆ ಜೈ. 176.00 ಕಿ.ಮೀ.ನಲ್ಲಿ ಕಾಲುವೆ ತಳಮಟ್ಟವು 560.426 ಮೀ. ಇದ್ದು ಬ್ಯಾಡಗಿ ತಾಲ್ಲೂಕಿನ ಭೂ ಪ್ರದೇಶಗಳ ಸರಾಸರಿ ಲೆವೆಲ್‌ಗಳು 600 ಮೀ. ನಿಂದ 621 ಮೀ. ವರೆಗೆ ಇದ್ದು, ಭೌಗೋಳಿಕವಾಗಿ ಎತ್ತರದ ಪ್ರದೇಶವಾಗಿರುತ್ತದೆ.

ಉ) ಬ್ಯಾಡಗಿ ತಾಲ್ಲೂಕಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಸಲುವಾಗಿ ಸರ್ಕಾರವು ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಗೆ ಈಗಾಗಲೇ ಅನುಮೋದನೆಯನ್ನು ನೀಡಿದೆ. ಏತ ನೀರಾವರಿ ಯೋಜನೆಯ ಅನುಷ್ಠಾನದಿಂದ ಬ್ಯಾಡಗಿ ತಾಲ್ಲೂಕಿನ ಸುಮಾರು 13000 ಎಕರೆ ಪ್ರದೇಶಗಳು ನೀರಾವರಿಯ ಸೌಲಭ್ಯಕ್ಕೆ ಒಳಪಡುತ್ತದೆ.

ಊ) ಅನುಮೋದನೆಗೊಂಡಿರುವ ಗುಡ್ಡದಮಲ್ಲಾಪುರ ಏತ ನೀರಾವರಿ ಯೋಜನೆಯಡಿ ಸುಮಾರು 13000 ಎಕರೆ ಪ್ರದೇಶಗಳು ನೀರಾವರಿಯ ಸೌಲಭ್ಯಕ್ಕೆ ಒಳಪಡುತ್ತದೆ.

298(296) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ರಸ್ತೆ ಸಾರಿಗೆ ವಿಭಾಗೀಯ ಸಂಸ್ಥೆಗಳು ಯಾವುವು ;

ಆ) ಸಾರಿಗೆ ಸಂಸ್ಥೆಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಯಾವ ಯಾವ ಹೈವೆ ಡೆವಲಪರ್ಸ್‌ಗಳಿಗೆ ಕೊಟ್ಟಿರುವ ಪ್ರವೇಶ ಶುಲ್ಕದ ಪ್ರಮಾಣ ಎಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.

ಆ) ಹೈವೇ ಡೆವಲಪರ್ಸ್‌ಗಳಿಗೆ ಪ್ರವೇಶ ಶುಲ್ಕವನ್ನು ಈ ಕೆಳಕಂಡಂತೆ ಪಾವತಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ :

(ರೂ.ಲಕ್ಷಗಳಲ್ಲಿ)

	ಕಂಪನಿ	2003-04	2004-05 ಡಿಸೆಂಬರ್ 04 ರವರೆಗೆ	ಒಟ್ಟು
1	ಮೆ : ಜೆಸ್ ಟೋಲ್ ಪ್ರೈವೇಟ್ ಲಿಮಿಟೆಡ್	18.07	100.66	118.73
2	ಮೆ : ನಂದಿ ಹೈವೇ ಡೆವಲಪರ್ಸ್, ರಾ.ಹೆ.–4, ಹುಬ್ಬಳ್ಳಿ–ಧಾರವಾಡ	14.62	12.16	26.78
	ಇತರೆ	**30.76**	**10.41**	**51.17**
	ಒಟ್ಟು	**73.45**	**123.23**	**196.68**

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ :

1	ನಂದಿ ಹೈವೇ ಡೆವಲಪರ್ಸ್	–	ರೂ. 17,54,190.00
2	ಜೆ.ಎ.ಎಸ್.ಟೋಲ್ ರೋಡ್ ಕಂಪನಿ	–	ರೂ. 47,35,970.00